ಅಧ್ಯಕ್ಷರು :- ಹೆಣ್ಣು ಮಕ್ಕಳು ಪ್ರಶ್ನೆ ಕೇಳುತ್ತಿದ್ದಾರೆ. ಈಗಲೂ ನೀವು ಗಲಾಟೆ ಮಾಡುತ್ತೀರಾ?

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ಅವರ ಬಗ್ಗೆ ಏನೂ ಇಲ್ಲ. ಆದರೆ ಪ್ರಾರ್ಥನೆ ಯಾವಾಗ ಪ್ರಾರಂಭ ಮಾಡುವುದು ಎಂದು ಹೇಳುವಂತಹ ಪ್ರಶ್ನೆ ನಮ್ಮಲ್ಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ತಾವು ಸಮಯಾವಕಾಶವನ್ನು ನಿಗದಿ ಮಾಡಿದರೆ ಇಲ್ಲಿ ಪ್ರಾರ್ಥನೆ ಮಾಡೋಣ.

ಶ್ರೀ ಸಿ.ಆರ್. ಸಗೀರ್ ಅಹಮದ್ :- ದೇವರನ್ನು ಒಲಿಸಿಕೊಳ್ಳುವ ಬಗ್ಗೆ ನಿಮ್ಮನ್ನೇ ಕೇಳಿ ಪ್ರಾರ್ಥನೆ ಮಾಡಬೇಕು ನಾವು.

ಶ್ರೀ ಡಿ.ವಿ. ಸದಾನಂದ ಗೌಡ :- ಒಂದು ಪ್ರಶ್ನೆ. ಎಲ್ಲೆಲ್ಲಿ ಪ್ರಾರ್ಥನೆ ಆಗಬೇಕು ಎಂದು ಹೇಳುವಂತಹದ್ದೂ ಇಲ್ಲೇ ನಿಶ್ಚಯ ಆಗಲಿ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ :- ಹಬ್ಬ ಆಚರಿಸಲು ಈಗ ನಾವೆಲ್ಲರೂ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುತ್ತಿದ್ದೇವೆ. ಆದ್ದರಿಂದ ಈ ಒಂದು ನೀರಿನ ಅಭಾವ ಹೆಚ್ಚಾಗಿ ಇರುವುದರಿಂದ ಕಾವೇರಿ ನದಿಯಿಂದ ಸ್ವಲ್ಪ, ಮತ್ತು ಕೆಆರ್‌ಎಸ್‌ನಿಂದ ಸ್ವಲ್ಪ ನಮ್ಮ ಸಿಡಿಎಸ್ ನಾಲೆಗೆ 3-4 ದಿವಸ ಈ ಹಬ್ಬದ ಪ್ರಯುಕ್ತ ನೀರು ಬಿಟ್ಟು ಕೊಟ್ಟರೆ ಅಲ್ಲಿಯ ಜನಕ್ಕೆ ಹಬ್ಬ ಆಚರಣೆ ಮಾಡುವುದಕ್ಕೆ ಅನುಕೂಲ. ದನಕರುಗಳಿಗೆ ಮತ್ತು ನನ್ನ ಕ್ಷೇತ್ರದಲ್ಲಿ ಅನೇಕ ದೇವಸ್ಥಾನಗಳಲ್ಲಿ ಅನ್ನ ಸಂತರ್ಪಣೆ ನಡೆಯುತ್ತಿದೆ. ಅಂತಹವಕ್ಕೆಲ್ಲಾ ಒಳ್ಳೆಯ ಅವಕಾಶ ಆಗುತ್ತದೆ. ಇಷ್ಟಾದರೂ ನಮಗೆ ಈ ಕ್ಷಣದಲ್ಲಿ ಉಪಕಾರ ಮಾಡಿಕೊಟ್ಟರೆ ನಾನು ಕ್ಷೇತ್ರದಲ್ಲಿ ಹೋಗಿ ನೆಮ್ಮದಿಯಾಗಿ ಉಸಿರಾಡಬಹುದು. ಆದ್ದರಿಂದ ತಾವು ದಯವಿಟ್ಟು ಇದನ್ನು ನಡೆಸಿಕೊಡಬೇಕು ಎಂದು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :- ವೆರಿ ಗುಡ್. ನೋಡಿರಿ, ನಿಮ್ಮದು ಬೇಕಾದಷ್ಟು ಪ್ರಶ್ನೆಗಳು ಬರುತ್ತವೆ. ಹೆಣ್ಣು ಮಕ್ಕಳದ್ದು ಯಾವತ್ತೋ ಒಂದು ದಿವಸ ಬಂದಾಗ ನೀವ್ಯಾಕೆ ಅದರ ಮಧ್ಯೆ ಪ್ರಶ್ನೆ ಕೇಳುತ್ತೀರಿ?

ಶ್ರೀ ವಿ.ಎಸ್. ಕೌಜಲಗಿ :- ಮಾನ್ಯ ಸಭಾಧ್ಯಕ್ಷರೆ, "ನೀರಿಳಿಯದ ಗಂಟಲೋಳ್ ಕಡುಬನಂ ತುರುಕಿದಂತಾಯ್ತು" ಏಕೆ ನೀರಿಲ್ಲ? ಪರಿಸ್ಥಿತಿ ಕೆಟ್ಟಿದೆ, ನೀರು ಬಿಡು ಎಂದರೆ ನೀರು ಬಿಡಲು ಎಲ್ಲಿಂದ ಸಾಧ್ಯ ಇದೆ? ಯಾವ ಜಲಾಶಯದಲ್ಲಿ ನೀರು ಇದೆ? ಆದರೆ ಅವರ ಕಳಕಳಿಯನ್ನು ಅರ್ಥ ಮಾಡಿಕೊಂಡು ವರುಣನಲ್ಲಿ ಎಲ್ಲರೂ ಮುಂದಿನ ವರ್ಷ, ಹೊಸ ವರ್ಷ ಸರಿ ಹೋಗಲಿ ಎಂದು ಪ್ರಾರ್ಥನೆ ಮಾಡಬಹುದು.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸ್ಥಾಪನೆ

209(2114) ಶ್ರೀಮತಿ ಅನಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಎಷ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ಥಾಪಿತವಾಗಿವೆ? ಉಳಿದ ಹಳ್ಳಿಗಳಲ್ಲಿ ಸಂಘಗಳನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ? ವಿವರ ನೀಡುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಈವರೆಗೆ 139 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಲಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ಗಂಡ್ಲಹಳ್ಳಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ನೋಂದಾಯಿಸಲು ಹಾಲು ಒಕ್ಕೂಟದಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ್ದು, ಈ ಸಂಘದ ಮುಖ್ಯ ಪ್ರವರ್ತಕರಿಗೆ ಸಂಘದ ನೋಂದಣಿಗಾಗಿ ಅಗತ್ಯವಿರುವ ಷೇರುಧನ ಸಂಗ್ರಹಿಸಲು ಅನುಮತಿ ನೀಡಲಾಗಿದೆ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜ್ :- ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 139 ಹಾಲು ಉತ್ಪಾದಕರ ಸಂಘಗಳನ್ನು ಈಗಾಗಲೇ ನೊಂದಾಯಿಸಿದ್ದಾರೆ. ಮತ್ತು ಗಂಡ್ಲಹಳ್ಳಿ ಗ್ರಾಮಕ್ಕೆ ಶೇರು ಧನ ಸಂಗ್ರಹಿಸಲು ಅನುಮತಿ ನೀಡಲಾಗಿದೆ ಎಂದು ಈಗ ಉತ್ತರ ಕೊಟ್ಟಿದ್ದಾರೆ. 139 ಸಂಘಗಳು ಇರುವುದು. ಆದರೆ ನಮ್ಮ ಚಿಕ್ಕಬಳ್ಳಾಪುರದಲ್ಲಿ 305 ಹಳ್ಳಿಗಳು ಇವೆ. ಆದ್ದರಿಂದ ಮಿಕ್ಕ ಹಳ್ಳಿಗಳಿಗೂ ಸಹಕಾರ ಸಂಘಗಳು ಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ದೇಶದ ಬೆನ್ನಲುಬು ರೈತ ಎಂದು ಹೇಳುತ್ತಾರೆ. ರೈತನ ಬೆನ್ನೆಲುಬು ಹಸುಗಳು ಎಂದು ನಾನು ಹೇಳುತ್ತೇನೆ. ಒಂದು ಹಳ್ಳಿಯಲ್ಲಿ 150 ಲೀಟರ್ ಹಾಲು ಉತ್ಪಾದನೆ ಆದರೆ ಅಲ್ಲಿ ಸಂಘವನ್ನು ಮಾಡಬಹುದಲ್ಲಾ ಆದ್ದರಿಂದ ನಮ್ಮ ಚಿಕ್ಕಬಳ್ಳಾಪುರಕ್ಕೆ ಮೂರು ವರ್ಷದಿಂದ ಕೇಳಿದ್ದೇನೆ. ಆದ್ದರಿಂದ 20 ಹಳ್ಳಿಗಳಿಗೆ ಮಾಡಿಕೊಟ್ಟರೆ ಒಂದು 200 ಜನರಿಗಾದರೂ ಅನುಕೂಲ ಆಗುತ್ತದೆ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ಅರ್ಥ ಆಗುತ್ತಿದೆ. ಇಲ್ಲಿ ನಮ್ಮ ಕೋಲಾರ ಜಿಲ್ಲಾ ಹಾಲು ಉತ್ಪಾದಕರ ಯೂನಿಯನ್‌ಗೆ ಯಾವ ಹಳ್ಳಿಯಿಂದ ಅರ್ಜಿ ಕೊಡುತ್ತಾರೆ, ಎಲ್ಲಿ ಹಸುಗಳು ಜಾಸ್ತಿ ಇದ್ದಾವೋ, ಎಲ್ಲಿ ಹಸು ಹೆಚ್ಚಿಗೆ ಉತ್ಪಾದನೆ ಆಗುತ್ತದೆ, ಅಲ್ಲಿ ಒಂದು ಸರ್ವೆ ಮಾಡಿ ಅದನ್ನು ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ನಾನು ಅನುಕೂಲ ಕೂಡ ಮಾಡಿಕೊಡುತ್ತಿದ್ದೇವೆ. ಬಹುಶಃ ಅವರಿಗೆ ಅವರ ಕ್ಷೇತ್ರದಲ್ಲಿ ಮುಖ್ಯ ಪ್ರವರ್ತಕರಾಗಿ ಶ್ರೀ ಮುನಿಶಾಮಪ್ಪ ಅವರನ್ನು ಗಂಡ್ಲಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಈಗಾಗಲೇ ನೇಮಕ ಮಾಡಲಾಗಿದೆ. ಮತ್ತು 550 ಶೇರನ್ನು, ಹತ್ತು ರೂಪಾಯಿ ಮೌಲ್ಯದ್ದು, ತೆಗೆದುಕೊಳ್ಳುವುದಕ್ಕೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. 30.4.03ಕ್ಕೆ ಈ ಶೇರು ಸಂಗ್ರಹ ಆಗಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧಿಕೃತವಾಗಿ ಪರವಾನಗಿಯನ್ನು ಕೊಡುತ್ತಿದ್ದೇವೆ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒಂದು ಹಳ್ಳಿಯಲ್ಲಿದ್ದು ಮಾತ್ರ ಹೇಳಿದ್ದಾರೆ. ಆದ್ದರಿಂದ ದಯವಿಟ್ಟು 20 ಹಳ್ಳಿ ವಿಚಾರ ಇದೆ. ಈಗಾಗಲೇ ಮೂರುವರೆ ವರ್ಷ ಆಗಿದೆ. ಆದ್ದರಿಂದ 20 ಹಳ್ಳಿಗಳಿಗೆ ಮಾಡಿಕೊಟ್ಟರೆ ತುಂಬಾ ಅನುಕೂಲ ಆಗುತ್ತದೆ. ಹೆಚ್ಚಿನ ಹಾಲು ಉತ್ಪಾದನೆ ಆಗುತ್ತದೆ ಎಂದು ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯ ಅಧ್ಯಕ್ಷರೆ, ಎಲ್ಲಿ ಹಸುಗಳು ಜಾಸ್ತಿ ಇದ್ದಾವೆ ಎಲ್ಲಿ ಹಾಲು ಜಾಸ್ತಿ ಕರೆಯುತ್ತಾರೆ, ಅವರು ಅರ್ಜಿಯನ್ನು ಹಾಲು ಉತ್ಪಾದಕರ ಒಕ್ಕೂಟಕ್ಕೆ ಕೊಟ್ಟರೆ, ಅವರು ಸರ್ವೆ ಮಾಡಿ ತಕ್ಷಣವೇ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ ಮಾಹಿತಿ ಕೊಟ್ಟು ಅದನ್ನು ನೊಂದಾಯಿಸುವುದಕ್ಕೆ ಅನುಕೂಲ ಆಗುತ್ತದೆ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ :- ವಂದನೆಗಳು.

ಬಾಗೇಪಲ್ಲಿ ಕ್ಷೇತ್ರದಲ್ಲಿ ನ್ಯಾಯ ಬೆಲೆ ಅಂಗಡಿಗಳು

210(1756) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲಾ ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು;

ಆ) ಕಳೆದ ಮೂರು ವರ್ಷಗಳಿಂದ ಹೊಸದಾಗಿ ಮಂಜೂರು ಮಾಡಿ ಪರವಾನಗಿ ಪಡೆದಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು);

ಇ) ಈ ನ್ಯಾಯ ಬೆಲೆ ಅಂಗಡಿಗಳಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಗ್ರಾಮವಾರು ಪ್ರತಿ ನ್ಯಾಯಬೆಲೆ ಅಂಗಡಿಯ ವಿವರ ಒದಗಿಸುವುದು);

ಈ) ಕಳೆದ ಮೂರು ವರ್ಷಗಳಿಂದ ವಿತರಿಸಿರುವ ಹಸಿರು, ಕೇಸರಿ ಇತರೇ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; ಯಾವ ಆಧಾರದ ಮೇಲೆ ಈ ಪಡಿತರ ಚೀಟಿಗಳನ್ನು ಹಂಚಿಕೆ ಮಾಡಲಾಗುವುದು;

ಉ) ಕಳೆದ ಮೂರು ವರ್ಷಗಳಿಂದ ಅಮಾನತ್ತುಗೊಂಡಿರುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; ಇವುಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :

ಅ) 101.

ಆ) ಮೂರು

1. ಶ್ರೀ ತಿಪ್ಪರಾಜು ನ್ಯಾಯಬೆಲೆ ಅಂಗಡಿ - ಪಾತಕೋಟೆ
2. ಶ್ರೀ ಶಿವಪ್ಪ ನ್ಯಾಯಬೆಲೆ ಅಂಗಡಿ ಕೊತ್ತಕೋಟೆ
3. ಶ್ರೀ ಸಿ. ವೆಂಕಟೇಶ್ ನ್ಯಾಯಬೆಲೆ ಅಂಗಡಿ, ಶಂಕರವಾರಿಪಲ್ಲಿ

ಇ) ನ್ಯಾಯಬೆಲೆ ಅಂಗಡಿಗಳಿಗೆ ನಿಯೋಜಿಸಿರುವ ಗ್ರಾಮವಾರು ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿದೆ:

1. ಶ್ರೀ ತಿಪ್ಪರಾಜು ನ್ಯಾಯಬೆಲೆ ಅಂಗಡಿ - ಪಾತಕೋಟೆ

ಕ್ರ. ಸಂ.	ಗ್ರಾಮ	ಕೇಸರಿ	ಹಸಿರು	ಅಂ.ಆ.ಯೋ	ಒಟ್ಟು
1.	ಗೊಂದಿಪಲ್ಲಿ	02	40	06	48
2.	ಗುಜ್ಜೆಪಲ್ಲಿ	03	68	07	78